ದಿ: **23-01-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ **ಸವಾಲು 1 ರಿಂದ 4ನೇ ಪ್ರತಿವಾದಿಗಳ ಪರ ಶ್ರೀ ಎಂ.ಪಿ.ಸಿ ವಕೀಲರಿಂದ :**

ನಾನು ಅಂಪಾರಿನಲ್ಲಿ ವಾಸವಿದ್ದೇನೆ ಎಂದರೆ ಸರಿ. ನಾನು ವೃತ್ತಿಯಲ್ಲಿ ವಕೀಲ ಎಂದರೆ ಸರಿಯಲ್ಲ, ಆದರೆ ಕಾನೂನು ಅಭ್ಯಾಸ ಮಾಡಿದ್ದೇನೆ. ನಾನು ಸದ್ಯದಲ್ಲಿ ಕೃಷಿ ಉದ್ಯೋಗ ಮಾಡುತ್ತಿದ್ದೇನೆ. ಪ್ರತಿವಾದಿಗಳು ನನಗೆ ತುಂಬಾ ಪರಿಚಯಸ್ಥರು ಎಂದರೆ ಸರಿ. 1ನೇ ಪ್ರತಿವಾದಿಯ ಗಂಡ ಮತ್ತು ನಾನು ತುಂಬಾ ಸ್ನೇಹಿತರು ಎಂದರೆ ಸರಿ. ಆ ಸ್ನೇಹದ ಆಧಾರದ ಮೇಲೆ ನಾನು ಅವರ ಮನೆಗೆ ಹೋಗುತ್ತಿದ್ದೆ ಎಂದರೆ ಸರಿ. ಸಾಕ್ಷಿಯು ಅವರು ನಮ್ಮ ಮನೆಗೆ ಬರುತ್ತಿದ್ದರು ಎನ್ನುತ್ತಾರೆ. 1ನೇ ಪ್ರತಿವಾದಿಯ ಗಂಡನ ಹೆಸರಿಗೆ ಆಸ್ತಿ ವರ್ಗಾವಣೆ ಮಾಡುವ ಸಂಬಂಧ ಜಿ.ಪಿ.ಎ ದಾಖಲೆಯನ್ನು 1ನೇ ಪ್ರತಿವಾದಿಯ ಗಂಡನ ತಂದೆ ನನಗೆ ಬರೆದುಕೊಟ್ಟಿದ್ದರು ಎಂದರೆ ಸರಿ. ಸದರಿಯವರಿಗೆ ನನ್ನ ಮೇಲೆ ತುಂಬಾ ವಿಶ್ವಾಸ, ನಂಬಿಕೆ ಇತ್ತು ಎಂದರೆ ಸರಿ. 1ನೇ ಪ್ರತಿವಾದಿಯ ಗಂಡ ಮೃತರಾದ ನಂತರ ಸದರಿಯವರ ಕುಟುಂಬಕ್ಕೆ ಮೊದಲಿನಂತೆ ಸಹಾಯ ಮಾಡಿಕೊಂಡು ಬರುತ್ತಿದ್ದೇನೆ ಎಂದರೆ ಸರಿ. ಹಾಗೇ ಸದರಿಯವರ ಕೃಷಿ ಕೆಲಸಗಳಿಗೂ ಸಹ ಸಹಾಯ ಪಡೆಯುತ್ತಾರೆ ಎಂದರೆ ಸಾಕ್ಷಿಯು ಕೆಲವು ಸಲಹೆ ಕೇಳುತ್ತಾರೆ ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿ ಅಡಿಕೆ, ತೆಂಗು, ರಬ್ಬರ್ ಮುಂತಾದ ವಾಣಿಜ್ಯ ಬೆಳೆಗಳಿವೆ ಎಂದರೆ ಸರಿ. ಸದರಿ ಬೆಳೆಗಳಿಂದ 25 ಲಕ್ಷ ಆದಾಯವಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಅವರ ಆದಾಯ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ದಾವಾ ಸ್ವತ್ತು ಅಂಪಾರಿನ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ ಎಂದರೆ ಸರಿಯಲ್ಲ. ಆದರೆ ದಾವಾ ಸ್ವತ್ತಿಗೆ ತಾಗಿ ಮಣ್ಣಿನ ರಸ್ತೆ ಇದೆ. ದಾವಾ ಸ್ವತ್ತಿನ ಒಂದು ಸೆಂಟ್ಸಿನ ಮೌಲ್ಯ ಐವತ್ತು ಸಾವಿರ ಇದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ಸಾಲ ತುಂಬಲು ಹಣವನ್ನು ನನ್ನ ಸಾಲದ ಬ್ಯಾಂಕ್ ಖಾತೆಯಿಂದ ಪ್ರತಿವಾದಿಯರ ಖಾತೆಗೆ ವರ್ಗಾವಣೆ ಮಾಡಿದ್ದೇನೆ. ನಾನು ಚೆಕ್ ಮುಖಾಂತರ ಪ್ರತಿವಾದಿಗೆ ಹಣ ನೀಡಿಲ್ಲ ಎಂದರೆ ಸಾಕ್ಷಿಯು ನಾನು ಚೆಕ್ ನ್ನು ಬ್ಯಾಂಕಿನ ಮುಖಾಂತರ ನೀಡಿ ಪ್ರತಿವಾದಿಯರ ಖಾತೆಗೆ ಹಣ ವರ್ಗಾವಣೆ ಮಾಡಿದ್ದೇನೆ ಎನ್ನುತ್ತಾರೆ. ಪ್ರತಿವಾದಿಯರ ಖಾತೆಗೆ ಯಾವುದೇ ಹಣ ವರ್ಗಾವಣೆ ಮಾಡಿಲ್ಲ ಎಂದರೆ ಸುಳ್ಳು. ನಿ.ಪಿ -1ರಲ್ಲಿ ಹಣ ಹೇಗೆ ಪಾವತಿಸಿದ್ದೇನೆ ಎಂಬ ವಿವರವಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ಸಂದಾಯ ಮಾಡಿದ ಹಣವನ್ನು ಬ್ಯಾಂಕ್ ಮುಖಾಂತರ ವರ್ಗಾವಣೆ ಮಾಡಿದ್ದೇನೆ ಎಂದು ನಿ.ಪಿ - 1ರಲ್ಲಿ ನಮೂದಿಸಲು ತೊಂದರೆ ಇರಲಿಲ್ಲ.

ದಿನಾಂಕ 18-03-2021ರಂದು ಪ್ರತಿವಾದಿಗಳಿಗೆ ಹಣ ಸಂದಾಯವಾಗಿದೆ ಎಂದು ವಾದಪತ್ರದಲ್ಲಿ ಬರೆದಿದ್ದೇನೆ ಎಂದರೆ ಸರಿ. ನಾನು ಅಡಮಾನ ಪತ್ರವನ್ನು ದಿನಾಂಕ 12-03-2021ರಂದೇ ಆಗಿದೆ ಎಂದರೆ ಸಾಕ್ಷಿಯು ವಿಶ್ವಾಸದಲ್ಲಿ ಆಗಿದೆ ಎನ್ನುತ್ತಾರೆ. ನಿ.ಪಿ - 1ರಲ್ಲಿ ಹೇಳಿದ ಹಣವನ್ನು ಪ್ರತಿವಾದಿಗಳಿಗೆ ನಾನು ಪಾವತಿಸಿಲ್ಲ ಎಂದರೆ ಸರಿಯಲ್ಲ. ಆ ಕಾರಣ ನಿ.ಪಿ - 1ರಲ್ಲಿ ಹಣ ಹೇಗೆ ಪಾವತಿಸಿದ್ದೇನೆ ಎಂದು ವಿವರ ಇಲ್ಲ ಎಂದರೆ ಸರಿಯಲ್ಲ. ದಿನಾಂಕ 18-03-2021ರಂದು ಪಾವತಿಸಿದ್ದೇನೆ ಎನ್ನುವ ಹಣಕ್ಕೂ ನಿ.ಪಿ - 1ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ಕುಟುಂಬಕ್ಕೆ ನಾನು ಆತ್ಮಿಯನಾದ ಕಾರಣ ಹಾಗೂ ದಸ್ತವೇಜು ಬರೆಯಲು ಅನುಭವವುಳ್ಳ ಕಾರಣ ಪಹಣಿಯಲ್ಲಿ ಸಾಲಚುಕ್ತಾ ಮಾಡಲು ನನ್ನ ಸಹಾಯ ಕೇಳಿದ್ದರು ಅದನ್ನು ಉಪಯೋಗಿಸಿಕೊಂಡು ನಿ.ಪಿ - 1ರ ದಾಖಲೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಗಳು ನಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ದುರುಪಯೋಗಪಡಿಸಿಕೊಂಡು ನಿ.ಪಿ - 1ರ ದಾಖಲೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

ನಾನು ನಿ.ಪಿ - 8ರ ನೋಟೀಸ್ ನೀಡಿದ್ದೇನೆ ಎಂದರೆ ಸರಿ. ನಿ.ಪಿ - 8ಕ್ಕೆ ಪ್ರತಿವಾದಿಗಳು ಉತ್ತರ ನೀಡಿದ್ದಾರೆ ಎಂದರೆ ಸರಿ. ಸದರಿ ಸಮಜಾಯಿಷಿ ಪತ್ರದಲ್ಲಿ ನಾನು ಮಾಡಿದ ಮೋಸದ ಕೃತ್ಯವನ್ನು ವಿವರವಾಗಿ ತಿಳಿಸಿದ್ದಾರೆ ಎಂದರೆ ಸಾಕ್ಷಿಯು ನೆನಪಿಲ್ಲ ಎನ್ನುತ್ತಾರೆ. ಹಾಗಾಗಿ ಪ್ರತಿವಾದಿಯರು ನೀಡಿದ ಉತ್ತರ / ಸಮಜಾಯಿಷಿ ದಾಖಲೆಯನ್ನು ಹಾಜರುಪಡಿಸದೆ ಮುಚ್ಚಿಟ್ಟಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ - 1ರ ಅಡಮಾನ ಪತ್ರದ ಪ್ರಕಾರ ವ್ಯಾಜ್ಯ ಕಾರಣ ಇಲ್ಲದಿದ್ದರೂ ಸುಳ್ಳು ವ್ಯಾಜ್ಯ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ಯಾವುದೇ ಹಣ ಪಾವತಿಸಬೇಕಾಗಿಲ್ಲ, ಕಟ್ಟುಕಥೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳೆಲ್ಲಾ ಸೃಷ್ಠಿಸಿದ ದಾಖಲೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ**.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**